# Rajiv Awas Yojana: Guidelines for Slum-free City Planning
# ರಾಜೀವ್ ಆವಾಸ ಯೋಜನೆ: ಕೊಳೆಗೇರಿ-ಮುಕ್ತ ನಗರ ಯೋಜನೆ ಮಾರ್ಗಸೂಚಿಗಳು

## 1. ರಾಜೀವ್ ಆವಾಸ ಯೋಜನೆ: ಉದ್ದೇಶಗಳು - Rajiv Awas Yojana: Objectives

ನಗರ ಬಡಜನರು ಮತ್ತು ಕೊಳೆಗೇರಿ ವಾಸಿಗಳಿಗಾಗಿ ಇರುವ ರಾಜೀವ್ ಆವಾಸ ಯೋಜನೆಯು ಭಾರತದ ರಾಜ್ಯ / ಕೇಂದ್ರಾಡಳಿತ ಪ್ರದೇಶಗಳನ್ನು ನಿರ್ಣಾಯಕ ರೀತಿಯಲ್ಲಿ ಕೊಳಚೆ ಸಮಸ್ಯೆಯನ್ನು ಎದುರಿಸಲು ಪ್ರೋತ್ಸಾಹಿಸುತ್ತದೆ. ಇದು ಈ ಕೆಳಗಿನ ವಿಚಾರಗಳಿಗೆ ಕೇಂದ್ರೀಕರಿಸಿದಂತೆ ಬಹುಮುಖ ಸುಧಾರಣೆಗಾಗಿ ಕರೆ ನೀಡುತ್ತದೆ:

- ಪ್ರಸ್ತುತ ಇರುವ ಕೊಳಚೆ ಪ್ರದೇಶಗಳನ್ನು ಔಪಚಾರಿಕ ವ್ಯವಸ್ಥೆಯಡಿಯಲ್ಲಿ ತರುವುದು ಮತ್ತು ಅವರಿಗೆ ಉಳಿದ ಪಟ್ಟಣ ವಿಭಾಗಗಳಲ್ಲಿ ದೊರೆಯುವಂತೆ ಅದೇ ಮಟ್ಟದ ಮೂಲಭೂತ ಸೌಕರ್ಯಗಳನ್ನು ಹೊಂದಲು ಅನುಕೂಲ ಮಾಡುವುದು.
- ಕೊಳಚೆ ಪ್ರದೇಶಗಳನ್ನು ಸೃಷ್ಟಿಸಿರುವ ಔಪಚಾರಿಕ ವ್ಯವಸ್ಥೆಯ ವೈಫಲ್ಯಗಳ ನಿವಾರಣೆ; ಮತ್ತು
- ನಗರ ಭೂಮಿ ಕೊರತೆ ಮತ್ತು ವಸತಿ ಕೊರತೆಗಳನ್ನು ತಡೆಹಿಡಿಯುವುದು. ಇದರಿಂದ ಸೂರು ವಂಚಿತ ಬಡವರು ಜೀವನಾಧಾರ ಮತ್ತು ತಮ್ಮ ಉದ್ಯೋಗ ಮೂಲಗಳನ್ನು ಉಳಿಸಿಕೊಳ್ಳಲು ಕಾನೂನು ಬಾಹಿರ ಪರಿಹಾರಗಳನ್ನು ಅವಲಂಬಿಸುವುದು ತಪ್ಪುತ್ತದೆ.

ರಾಜೀವ್ ಆವಾಸ ಯೋಜನೆ ಅಡಿಯಲ್ಲಿ ರಾಜ್ಯ / ಕೇಂದ್ರಾಡಳಿತ ಪ್ರದೇಶಗಳು ನೋಡಿಕೊಳ್ಳಬೇಕಾದ ವಿಷಯಗಳ ಮಾಹಿತಿ ಅನುಬಂಧ- I ರಲ್ಲಿ ದೊರೆಯುತ್ತದೆ.

## 2. **Central Support: Pre-Conditions:ಕೇಂದ್ರ ಬೆಂಬಲ: ಪೂರ್ವ ಷರತ್ತುಗಳು:**

2.1 ಜೆ ಎನ್ ಎನ್ ಯು ಆರ್ ಎಂ ನಲ್ಲಿರುವಂತೆ, ರಾಜೀವ್ ಆವಾಸ ಯೋಜನೆಯ ಗುರಿಗಳು ಸಹ ನಗರ ಅಭಿವೃದ್ಧಿಯು ಒಳಗೊಳಿಸುವಿಕೆಯನ್ನು ಹೊಂದಲು ಅನುವುಮಾಡಿಕೊಡುವಂತೆ ಕೆಲವು ಸುಧಾರಣಾ ಷರತ್ತಿಗನುಗುಣವಾಗಿ ಕೊಳಚೆಗೇರಿಯ ಮರು ಅಭಿವೃದ್ಧಿ ಮತ್ತು ಕೈಗೆಟಕುವ ವಸತಿ ನಿರ್ಮಾಣದ ಕೇಂದ್ರ ಅನುದಾನದಿಂದ ಮುಂದೂಡಲಪಡುತ್ತವೆ. ಅನುಬಂಧ II, ರಾಜೀವ್ ಆವಾಸ ಯೋಜನೆಯು ಒಳಗೊಂಡಿರುವ ಸ್ವೀಕಾರಾರ್ಹ ಮತ್ತು ಸ್ವೀಕಾರಾರ್ಹವಲ್ಲದ ಘಟಕಗಳನ್ನು ವಿವರಿಸುತ್ತದೆ.

2.2 ರಾಜೀವ್ ಆವಾಸ ಯೋಜನೆಯಡಿಯಲ್ಲಿ ಸುಧಾರಣೆಗಳಿಗೆ ಸಂಬಂಧಿಸಿದಂತೆ, ಹಕ್ಕಿನ ಮೂಲಕ ಗೇಣಿಯ ಭದ್ರತೆ ಒಳಗೊಳಿಸುವ ನಗರಗಳನ್ನು ಉತ್ತೇಜಸುವಲ್ಲಿ ನಿರ್ಣಾಯಕವಾಗಿರುತ್ತದೆ. ಅದಕ್ಕನುಸಾರವಾಗಿ, ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳು ಕೊಳಚೆಗೇರಿಯ ವಾಸಿಗಳಿಗೆ ತಮ್ಮ ಆವಾಸಸ್ಥಾನದ ಮೇಲೆ ಕಾನೂನಾತ್ಮಕ ಹಕ್ಕನ್ನು ನೀಡಿದಾಗ ಮಾತ್ರ, ಕೇಂದ್ರವು ಆರ್ ಎ ವೈ ಯ ಅಡಿಯಲ್ಲ ಅನುದಾನವನ್ನು ಮೀಸಲಿಡುತ್ತದೆ. ಇತರೆ ಸುಧಾರಣೆಗಳು ಜೆ ಎನ್ ಎನ್ ಯು ಆರ್ ಎಂ ನ ಮೂರು ಬಡಜನ-ಪರ ಸುಧಾರಣೆಗಳನ್ನು, ಅವುಗಳು ಶಾಸನಗಳಾಗುವವರೆಗೆ ಮತ್ತು ಪದ್ಧತಿಯ ಭಾಗವಾಗುವವರೆಗೆ ಮುಂದವರಿಕೆಯಾಗುವುದನ್ನು ಒಳಗೊಂಡಿದೆ; ಎಲ್ಲಾ ಕೊಳಗೇರಿ ನಿವಾಸಿಗಳಿಗೆ ಆಸ್ತಿ ಹಕ್ಕುಗಳಿಗಾಗಿ ಶಾಸನಗಳ ರಚನೆ; ನಗರ ವಸತಿಗೆ ಸಂಬಂಧಿಸಿದಂತೆ, ಬಾಡಿಗೆ ಮತ್ತು ಬಾಡಿಗೆ ನಿಯಂತ್ರಣಾ ಕಾಯಿದೆಗಳಿಗೆ ಸುಧಾರಣೆಗಳು;

ಕಾನೂನುಗಳಿಗೆ ಸಂಬಂಧಿಸಿದಂತೆ ವಿಮರ್ಶೆ ಮತ್ತು ತಿದ್ದುಪಡಿ; ನಗರ ಯೋಜನೆ ಮತ್ತು ಅಭಿವೃದ್ಧಿ ರಚನೆಗಳಿಗೆ ಸಂಬಂಧಿಸಿದಂತೆ ನಿಯಮಗಳು ಮತ್ತು ನಿಯಂತ್ರಣಗಳು; ಮತ್ತು ನಗರೀಕರಣದ ಬೇಡಿಕೆಗಳನ್ನು, ಪ್ರಕ್ರಿಯೆ ಮತ್ತು ವೇಗವನ್ನು ಸಮರ್ಪಕವಾಗಿ ನಿಭಾಯಿಸಲು ಅಗತ್ಯವಾದ ಪದ್ಧತಿ.

ಜೆ ಎನ್ ಎನ್ ಯು ಆರ್ ಎಂ ಅಡಿಯಲ್ಲಿ, ಬಡಜನ-ಪರ ಸುಧಾರಣೆಗಳ ಮೂರು ಯೋಜನೆಗಳು ಈ ಕೆಳಗಿನಂತೆ ಪುನರಚ್ಚರಿಸಲ್ಪಟ್ಟಿವೆ:

- ನಗರ ಬಡಜನರಿಗೆ ಮೂಲಭೂತ ಸೇವೆಗಳಿಗಾಗಿ, ಸ್ಥಳೀಯ ಆಡಳಿತ ಸಮಿತಿಯ ಬಜೆಟ್ ಒಳಗೆ ಆಂತರಿಕ ಗುರುತಿಸುವಿಕೆ;
- ನಗರ ಬಡಜನರಿಗೆ, ಅವುಗಳಲ್ಲಿ ಕೈಗೆಟಕುವ ಬೆಲೆಯಲ್ಲಿ ವಾಸಸ್ಥಳ, ಸುಧಾರಿತ ವಸತಿ, ನೀರಿನ ಪೂರೈಕೆ ಒಳಗೊಂಡಿರುವಂತೆ ಮೂಲಭೂತ ಸೇವೆಗಳ ಒದಗಣೆ, ನೈರ್ಮಲ್ಯ ಮತ್ತು ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ಭದ್ರತೆಗಾಗಿ ಸರ್ಕಾರದ ಈಗಾಗಲೇ ಅಸ್ತಿತ್ವದಲ್ಲಿರುವ ಇತರೆ ಸಾರ್ವತ್ರಿಕ ಸೇವೆಗಳ ವಿತರಣೆಯನ್ನು ಖಾತ್ರಿಪಡಿಸಿಕೊಳ್ಳುವುದು; ಮತ್ತು
- ಇ ಡಬ್ಲ್ಯೂ ಎಸ್/ಲೈ ಐ ಜಿ ವರ್ಗದಲ್ಲಿ ಕ್ರಾಸ್-ಸಬ್ಸಿಡಿ ವ್ಯವಸ್ಥೆಯಡಿಯಲ್ಲಿ ಎಲ್ಲಾ ವಸತಿ ಯೋಜನೆಗಳ (ಸಾರ್ವಜನಿಕ ಮತ್ತು ಖಾಸಗಿ, ಎರಡೂ ಸಂಸ್ಥೆಗಳು) ಕನಿಷ್ಠ 20-25% ಅಭಿವೃದ್ಧಿಹೊಂದಿದ ಭೂಮಿಯನ್ನು ಗುರುತಿಸುವುದು.

**3. State Slum-free Plan of Action (POA): ರಾಜ್ಯ ಕೊಳೆಗೇರಿ-ಮುಕ್ತ ಕಾರ್ಯ ಯೋಜನೆ:**

3.1 ಪ್ರತಿ ರಾಜ್ಯವು ರಾಜ್ಯದ ಕೊಳೆಗೇರಿ-ಮುಕ್ತ ಯೋಜನೆ (ಪಿ ಒ ಆ) ಯನ್ನು ತಯಾರಿಸಬೇಕೆಂದು ರಾಜೀವ್ ಆವಾಸ ಯೋಜನೆಯು ಬಯಸುತ್ತದೆ. ಕೊಳೆಗೇರಿ ಆಸ್ತಿ ಹಕ್ಕುಗಳನ್ನು ನಗರ ಬಡಜನರಿಗೆ ಒಪ್ಪಿಸಲು ಶಾಸನವನ್ನು ರಚಿಸುವುದು ಪ್ರತಿಯೊಂದು ರಾಜ್ಯ ಪಿ ಒ ಎ ಯ ಮೊದಲ ಹೆಜ್ಜೆಯಾಗಿದೆ. ಪಿ ಒ ಎ ಯು ಎರಡು ಭಾಗಗಳಲ್ಲಿರಬೇಕು: ಒಂದು ಕೊಳೆಗೇರಿ ಪ್ರದೇಶಗಳ ಸುಧಾರಣೆ ಮತ್ತೊಂದು ಹೊಸ ಕೊಳೆಗೇರಿ ಪ್ರದೇಶಗಳು ಹುಟ್ಟದಂತೆ ನೋಡಿಕೊಳ್ಳಲು. ಭಾಗ- 1 ರಲ್ಲಿ ರಾಜ್ಯಗಳು, ಪ್ರಸ್ತಾವಿತ ಆಯ್ದ ನಗರಗಳಲ್ಲಿ ಆರ್ ಎ ವೈಅಡಿಯಲ್ಲಿ ಒಳಗೊಳ್ಳಬೇಕಾಗಿರುವ ಎಲ್ಲಾ ಕೊಳಚೆಗೇರಿಗಳನ್ನು, ಸಮೀಕ್ಷೆ ಮಾಡಿ ನಕಾಶೆ ತಯಾರಿಸಬೇಕಾಗುತ್ತದೆ. ಎರಡನೇ ಭಾಗದಲ್ಲಿ, ಒಂದು ನಗರವು 20 ವರ್ಷಗಳಲ್ಲಿ ಸಾಧಿಸಬಹುದಾದ ಬೆಳವಣಿಗೆಯ ದರವನ್ನು ವಿಶ್ಲೇಷಣೆ ಮಾಡಿ, ಅಂಕೆಸಂಖ್ಯೆಗಳ ಆಧಾರದ ಮೇಲೆ, ಬೇಡಿಕೆಗಳ ಜೊತೆ ಜೊತೆಗೆ ಮುನ್ನಡೆಯುವಂತೆ, ಕೈಗೆಟುಕುವಂತಹ ಇ ಡಬ್ಲ್ಯೂ ಎಸ್ ಮನೆಗಳನ್ನು ನಿರ್ಮಾಣ ಮಾಡಲು ಉತ್ತೇಜಿಸುವ ಸಲುವಾಗಿ, ಕಾಲ್ಪನಿಕ ಭೂಮಿಗಳನ್ನು ಪಡೆದುಕೊಳ್ಳಲು ಕಾರ್ಯಯೋಜನೆಯನ್ನು ಸ್ಪಷ್ಟಪಡಿಸಬೇಕಾಗುತ್ತದೆ. ಇಲ್ಲಿ, ನಗರ ಭೂವಿಸ್ತರಣೆ ಮಾಡುವುದು ಸಾಧ್ಯವಾಗಲು ಮತ್ತು ಎಲ್ಲ ಹೊಸ ಅಭಿವೃದ್ಧಿಗಳಲ್ಲಿ, ಇ ಡಬ್ಲ್ಯೂ ಎಸ್/ಲೈ ಐ ಜಿ ಗಳಲ್ಲಿ ಮೀಸಲಾತಿಯನ್ನು ತರುವ ಶಾಸನಗಳನ್ನು ತರಲು ನಗರ ಯೋಜನಾ ನಿಯಂತ್ರಣಗಳಲ್ಲಿ ಶಾಸನೋಕ್ತವಾದ ಮತ್ತು ಆಡಳಿತಾತ್ಮಕವಾದ ಬದಲಾವಣೆಗಳನ್ನು ತರಬೇಕಾಗುತ್ತದೆ. ಅನುಬಂಧ III ರಲ್ಲಿ ರಾಜ್ಯ ಕೊಳೆಗೇರಿ ಮುಕ್ತ ನಗರದ ಕಾರ್ಯಯೋಜನೆಯನ್ನು ನೀಡಲಾಗಿದೆ.

3.2 ರಾಜ್ಯವು ಗುರುತಿಸಿದ ಮತ್ತು ಐದು ವರ್ಷಗಳಲ್ಲಿ ಆರ್ ಎ ವೈ ಅಡಿಯಲ್ಲಿ ಒಳಗೊಳ್ಳಬೇಕೆಂದು ಉದ್ದೇಶಿಸಲಾದ

ನಗರಗಳನ್ನು ಮತ್ತು ಅವುಗಳ ಹಂತ ಹಂತವಾದ ಅಭಿವೃದ್ಧಿಯನ್ನು ಕೂಡ ರಾಜ್ಯ ಪಿ ಒ ಎ ಒಳಗೊಂಡಿರುತ್ತದೆ. ಇದು 'ಸಂಪೂರ್ಣ ನಗರದ ವಿಧಾನ' ಕ್ಕೆ ಬದ್ಧವಾಗಿರುತ್ತದೆ. ಇದರಿಂದ, ಗುರುತಿಸಲ್ಪಟ್ಟ ಪ್ರತಿಯೊಂದು ನಗರದ ಅನುಸೂಚಿತ ಅಥವಾ ಅನುಸೂಚಿತವಲ್ಲದ ಎಲ್ಲಾ ಕೊಳೆಗೇರಿಗಳನ್ನು ಸುಧಾರಿಸುವಲ್ಲಿ ಸಮಗ್ರ ಯೋಜನೆಯನ್ನು ರೂಪಿಸಲು ಅನುಕೂಲವಾಗುತ್ತದೆ. ಪ್ರತಿ ನಗರದ ಒಳಗೆ, ಪುನರಭಿವೃದ್ಧಿಗಾಗಿ ಆಯ್ದ ಪ್ರತಿ ಕೊಳೆಗೇರಿಯೊಳಗೆ, ಒಂದು ಸಮಗ್ರತಾ ವ್ಯಾಪ್ತಿ ಇರುವ ಎಲ್ಲಾ ಮೂಲಭೂತ ನಾಗರಿಕ ಸೌಕರ್ಯ ಮತ್ತು ಸೇವೆಗಳ ಹಾಗೂ ಒಳ್ಳೆಯ ವಸತಿ ಅಗತ್ಯವಿದೆ. ಇಲ್ಲಿ ಸ್ವಚ್ಛತೆ ಮತ್ತು ಯೋಜಿತ ಬಡಾವಣೆಗಳಿಗೆ (ಎಲ್ಲಿ ಅಗತ್ಯವೋ ಅಲ್ಲಿ ಅಸ್ಥಿತ್ವದಲ್ಲಿರುವ/ ಬದಲಾಣೆಯಾದ ಕಟ್ಟಡ ಬೈ-ಲಾಗಳ ಆಧಾರದ ಮೇಲೆ ಪ್ಲಾಟುಗಳನ್ನು ಮರು ರಚಿಸಿದ ನಂತರ). ಹಾಗೂ ಸಂಪೂರ್ಣ ನೈರ್ಮಲ್ಯ ವ್ಯವಸ್ಥೆ (ಪ್ರತಿಯೊಂದು ಮನೆಗ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಹಾಗ ನೀರು ಪೂರೈಕೆ ಮಾಡುವ ಮೂಲಕ) ಇವುಗಳಿಗೆ ಹೆಚ್ಚು ಒತ್ತು ನೀಡಿರಬೇಕು. ವಸತಿಗೆ ಸಂಬಂಧಿಸಿದಂತೆ, ರಾಜ್ಯವು ಮನೆ ನಿರ್ಮಾಣಕ್ಕೆ ಬೇಕಾದ ನಿಧಿ ಮತ್ತು ಯೋಜನೆಗಳ ಬಗ್ಗೆ ಸಡಿಲ ಧೋರಣೆ ತಾಳಬಹುದು. ಇದರಿಂದ ಮುನಿಸಿಪಾಲಿಟಿ ಅಥವಾ ರಾಜ್ಯಗಳ ತಾಂತ್ರಿಕ ಮತ್ತು ವಿನ್ಯಾಸ ಬೆಂಬಲದೊಂದಿಗೆ ಫಲಾನುಭವಿ-ನಿರ್ಮಿತ ಮನೆಗಳ ಮಾದರಿಯನ್ನು ಅನುಸರಿಸುವಲ್ಲಿ ಅನುಕೂಲವಾಗುತ್ತದೆ ಅಥವಾ ರಾಜ್ಯದ ಖಾಸಗಿ ಸಂಸ್ಥೆಗಳ ಸಹಾಯದಿಂದ/ಸಹಯೋಗದೊಂದಿಗೆ ಅಥವಾ ಮಿಶ್ರ ಪದ್ಧತಿಗಳ ಬಳಕೆಯ ಮೂಲಕ ವಸತಿ ನಿರ್ಮಾಣ ಕೈಗೊಳ್ಳಬಹುದು.ಎಫ್ಎಸ್ಐ ಮೂಲಕ ಕ್ರಾಸ್-ಸಬ್ಸಿಡಿ ದೊರೆಯುವುದನ್ನು ಅನುಕೂಲಿಸಿಕೊಡುವ ಮತ್ತು ಕೊಳೆಗೇರಿ ಪುನರಾಭಿವೃದ್ಧಿಗಾಗಿ ಸಾಧ್ಯವಾದಷ್ಟು ಭೂಬಳಕೆಯಲ್ಲಿ ರಿಯಾಯ್ತಿ ಕೊಡಿಸುವುದು ಸಾಧ್ಯವಾಗಲು ಪಿಒಎಯು ಈ ಸಾರ್ವಜನಿಕ-ಖಾಸಗಿ-ಪಾಲುದಾರಿಕೆಗೆ ಪ್ರಥಮ ಪ್ರಾಶಸ್ತ್ಯ ನೀಡಬೇಕು. ಪಿಒಎಯು ಪ್ರತಿ ಕೊಳೆಗೇರಿಯಲ್ಲಿ ಅನುಸರಿಸಲಿರುವ ಮಾದರಿಯನ್ನು ವಿವರಿಸಬೇಕು, ಒಂದು ಸಮುದಾಯದ ಸಹಯೋಗವನ್ನು ಪಡೆಯುವ ಪ್ರಯತ್ನಗಳ ಬಗ್ಗೆ ವಿವರಿಸಬೇಕು ಮತ್ತು ಅಭಿವೃದ್ಧಿಗಾಗಿ ಇರುವ ಸಮಯ ನಿರ್ಬಂಧದೊಂದಿಗೆ ಸಮಗ್ರತಾ ಅಭಿವೃದ್ಧಿಗಾಗಿ ಆರ್ಥಿಕ ಯೋಜನೆಯನ್ನೂ ವಿವರಿಸಬೇಕು.

3.3 ರಾಜ್ಯ ಪಿಒಎಯು ಆರ್ ವೈಎಯಡಿಯಲ್ಲಿ ಸೇರ್ಪಡೆಯಾಗಬೇಕಾದ ನಗರಗಳಿಗಾಗಿ ಕೊಳೆಗೇರಿ-ಮುಕ್ತ ನಗರ

ಯೋಜನೆಗಳನ್ನು ಒಳಗೊಂಡಿರಬೇಕಾಗಿದ್ದರೂ, ನಗರ ಪಿಒಎಯು ಪ್ರತಿ ನಗರ ಒಳಗೊಂಡಂತೆ ಆರ್ ವೈಎಯಡಿಯಲ್ಲಿ ಬರುವ ನಗರಗಳ ಒಳಗೆ ಇಡೀ ಕೊಳೆಗೇರಿ ಉನ್ನತೀಕರಿಸುವ ಗತಿಯನ್ನು ಹಂತಹಂತವಾಗಿ ಮಾಡಬಹುದು. ಹಂತ ಹಂತವಾದ ಉನ್ನತೀಕರಣದ ಉದ್ದೇಶದಿಂದ, ಪ್ರತಿ ನಗರದ ವಲಯಗಳನ್ನಾಗಿ ವಿಂಗಡಿಸಬಹುದು ಮತ್ತು ಪ್ರತಿ ವಲಯ ತೆಗೆದುಕೊಂಡು ಒಂದು ಇಡೀ ಮೂಲಭೂತ ವ್ಯವಸ್ಥೆ ಮತ್ತು ಸೇವೆಗಳ ಸಾರ್ವತ್ರಿಕ ಅವಕಾಶ ಖಚಿತಪಡಿಸಿಕೊಳ್ಳಲು ಉತ್ತಮ ವಸತಿ ನಿರ್ಮಾಣ ಮಾಡಿ, ವಲಯವನ್ನು ಕೊಳೆಗೇರಿ ಮುಕ್ತ ಮಾಡಬಹುದು. ಇದರಿಂದ ವಲಯದೊಳಗಿನ ಕೊಳೆಗೇರಿಯನ್ನು ನಗರದುದ್ದಗಲದ/ವಲಯಾಧಾರಿತ ಹಾದಿಯು, ಲಭ್ಯವಿರುವ ಖಾಲಿ ಸ್ಥಳ ಅಥವಾ ಅನುಸೂಚಿತ ಕೊಳಚೆ ಪ್ರದೇಶ ಭೂಮಿಗೆ ಸ್ಥಳಾಂತರಿಸುವುದನ್ನು ಸಾಧ್ಯವಾಗುತ್ತದೆ.

3.4 ರಾಜ್ಯಗಳು, ರಾಜ್ಯ ಮಂತ್ರಿಮಂಡಳದಿಂದ ಒಪ್ಪಿಗೆ ಪಡೆದ ಆಸ್ತಿ ಹಕ್ಕುಗಳ ಶಾಸನದೊಂದಿಗೆ

ಹಾಗೂ ಅದನ್ನು ವಿಧಾನ ಸಭೆಯ ಮುಂದಿಡುವ ರಾಜ್ಯ ಸರಕಾರದ ಬದ್ಧತೆಯೊಂದಿಗೆ ಕೇಂದ್ರ ಸರ್ಕಾರಕ್ಕೆ ಕೊಳೆಗೇರಿ ಮುಕ್ತ ನಗರ ಕಾರ್ಯ ಯೋಜನೆಗಳ (ಪಿಇಬ)ನ್ನು ಅನುಮೋದನೆಗಾಗಿ ಕಳುಹಿಸುವ ಅಗತ್ಯವಿದೆ. ಪಿಒಎಗಳು ಆಯ್ದ ನಗರಗಳಲ್ಲಿ ಕ್ರಾಸ್ ಸಬ್ಸಿಡಿಯನ್ನು ಗರಿಷ್ಟ ಗೊಳಿಸಲು ನಗರಗಳನ್ನು ಆಯ್ಕೆ ಮಾಡಲಾಗಿದೆ, ಮತ್ತು ಪಿಪಿಪಿ ಮೂಲಕ ಅದಕ್ಕೆ ಬದ್ಧತೆ ಎಷ್ಟಿದೆ ಎನ್ನುವುದನ್ನು ವಿಶ್ಲೇಷಿಸಿದೆ ಎಂಬುದನ್ನು ಕೇಂದ್ರವು ಮೊದಲು ಖಚಿತಪಡಿಸಿಕೊಳ್ಳುತ್ತದೆ. ಅಲ್ಲದೇ ಸಮುದಾಯ ಪಾಲ್ಗೊಳ್ಳುವಿಕೆಗಾಗಿ ಬಳಸಿದ ಕಾರ್ಯತಂತ್ರಗಳು ಸಂಪೂರ್ಣವಾಗಿ ಕಾರ್ಯಗತಗೊಂಡಿವೆಯೋ ಇಲ್ಲವೋ ಎಂಬುದನ್ನೂ ಖಚಿತಪಡಿಸಿಕೊಳ್ಳುತ್ತವೆ.

4. **Slum-free City Planning: Methodology ಕೊಳೆಗೇರಿ ಮುಕ್ತ ನಗರ ಯೋಜನೆ: ಕಾರ್ಯವಿಧಾನ**

4.1 ಕಲ್ಪನಾತ್ಮಕ ಚೌಕಟ್ಟು:

ಸ್ಥಳೀಯ ಆಡಳಿತ ಸಮಿತಿಯಲ್ಲಿನ ಕೊಳೆಗೇರಿಮುಕ್ತ ನಗರ ಸಮಿತಿಯನ್ನು ಪುರಸಭೆ ಆಯುಕ್ತರು ಅಥವಾ ಕಾರ್ಯನಿರ್ವಾಹಕ ಅಧಿಕಾರಿ ನೋಡಿಕೊಳ್ಳುತ್ತಾರೆ. ಈ ಕೊಳೆಗೇರಿ ಮುಕ್ತ ನಗರ ಸಮಿತಿಯು ರಾಜ್ಯ ಸರ್ಕಾರ ನೀಡಿದ ಸಲಹೆಯ ಮೇರೆಗೆ ಕೊಳೆಗೇರಿ ಮುಕ್ತ ನಗರ ಯೋಜನೆಗಳನ್ನು ತಯಾರಿಸಬೇಕು. ಅಲ್ಲದೇ ಈ ಯೋಜನೆಗಳಿಗೆ ರಾಜ್ಯ ಮಟ್ಟದಲ್ಲಿ ರಾಜೀವ್ ಆವಾಸ್ ಯೋಜನೆ ನೋಡಲ್ ಏಜೆನ್ಸಿಗಳ ಬೆಂಬಲವೂ ಇರಬೇಕು. ಮುಂದಿನ ಪುಟದಲ್ಲಿರುವ ನಕ್ಷೆಯು ಕೊಳೆಗೇರಿ ಮುಕ್ತ ನಗರ ಯೋಜನೆ ತಯಾರಿಕೆಗೆ ಕಲ್ಪನಾ ಚೌಕಟ್ಟನ್ನು ಒದಗಿಸುತ್ತದೆ.

4.2 ಯೋಜನಾ ಕಾರ್ಯವಿಧಾನ:

ಕೊಳೆಗೇರಿ ಮುಕ್ತ ನಗರ ಯೋಜನೆಯ ತಯಾರಿಕೆ ಕೊಳೆಗೇರಿ ಪುನರಾಭಿವೃದ್ಧಿ/ಪುನರ್ವಸತಿ ಯೋಜನೆಗಳನ್ನು ಆಧರಿಸಿದ್ದು-ಇವುಗಳು ಒಳಗೊಳ್ಳುವ ಪ್ರಮುಖ ಅಂಶಗಳೆಂದರೆ, a) ಗುರುತಿಸಿದ/ಗುರುತಿಸಿರದ ಎಲ್ಲ ಕೊಳೆಗೇರಿಗಳ ಸರ್ವೇಕ್ಷಣೆ; (b) ನವೀನ ತಂತ್ರಜ್ಞಾನ ಬಳಸಿ ಕೊಳೆಗೇರಿಗಳ ನಕಾಶೆ ತಯಾರಿ; (c)ಭೂ-ಪ್ರಾದೇಶಿಕ ಮತ್ತು ಸಾಮಾಜಿಕ-ಆರ್ಥಿಕ ದತ್ತಾಂಶಗಳ ಏಕೀಕರಣ; (d)ಪ್ರತಿ ಕೊಳೆಗೇರಿಗಾಗಿ ಇರುವ ಅಭಿವೃದ್ಧಿ ಮಾದರಿಯನ್ನು ಗುರುತಿಸುವುದು. ಸೂಕ್ತ ಪ್ರಮಾಣದ ಅಳತೆಯ ಮೂಲ ನಕ್ಷೆಗಳು ಕೊಳೆಗೇರಿ ಪುನರಾಭಿವೃದ್ಧಿ ಯೋಜನೆಯ ತಯಾರಿಕೆಗೆ/ಕೊಳೆಗೇರಿ ಮುಕ್ತ ನಗರ ಯೋಜನೆಗೆ ತುಂಬ ಆವಶ್ಯಕ. ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳು ಕೊಳೆಗೇರಿ ಮುಕ್ತ ನಗರ ಯೋಜನೆಗಳು ತಯಾರಿಸಲು ಕೆಳಗೆ ನೀಡಿದ ಪರಿಹಾರಗಳಿಗನುಗುಣವಾಗಿ ಮುಂದುವರಿಯಬಹುದು:

(i) ಎನ್ ಆರ್ ಎಸ್ ಸಿ (NRSC) / ಇಸ್ರೋ ಗಳು ತೆಗೆದ ಕಾರ್ಟೋಸ್ಯಾಟ್ (CARTOSAT) II/ಅಥವಾ ಇತ್ತೀಚಿಗಿನ ಉಪಗ್ರಹ ಚಿತ್ರಗಳನ್ನು ಬಳಸಿ ಇಡೀ ನಗರ ಮತ್ತು ಅದರ ಅಂಚಿನ ನಕ್ಷೆಗಳನ್ನು ತಯಾರಿಸುವುದು.

(ii) ಈ ಉಪಗ್ರಹ ಚಿತ್ರಗಳ ಸಹಾಯದಿಂದ ಮತ್ತು ಇತರ ಲಭ್ಯ ದತ್ತಾಂಶಗಳ ಆಧಾರದ ಮೇಲೆ ನಗರದ ಎಲ್ಲಾ ಕೊಳೆಗೇರಿ ಸಮೂಹಗಳ ಕೊಳೆಗೇರಿಗಳನ್ನು ಗುರುತಿಸಿ ಯಾದಿಯನ್ನು ತಯಾರಿಸುವುದು.

(iii) ನಗರ ಸಮೂಹಗಳ ಪ್ರತಿ ವಲಯದಲ್ಲೂ ಪುನರಭಿವೃದ್ಧಿ / ಪುನರ್ವಸತಿ ಅಭಿವೃದ್ಧಿ ಉದ್ದೇಶಗಳಿಗಾಗಿ ಬಳಸಬಹುದಾದ ಖಾಲಿ ಜಾಗಗಳನ್ನು ಹುಡುಕಿತೆಗೆಯುವುದು.

(iv) ಕಾರ್ಟೋಸ್ಯಾಟ್ ಜೊತೆಗಿನ ಜಿಐಎಸ್, ಒಟ್ಟು ನಿಲ್ದಾಣದ ಮೂಲಕ ಸಂಗ್ರಹಿಸಿದ ನೆಲ ಮಟ್ಟದ ಪ್ರಾದೇಶಿಕ ದತ್ತಾಂಶ ಇವುಗಳನ್ನು ಬಳಸಿಕೊಂಡು, ನಗರ ಮತ್ತು ಅದರ ಅಂಚಿನಲ್ಲಿರುವ ಪ್ರತಿ ಕೊಳೆಗೇರಿಯ ನಕಾಶೆಯನ್ನು ತಯಾರಿಸುವುದು. ಗಡಿಗಳಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಮಾಹಿತಿ ಸಮೀಕ್ಷೆಯನ್ನು ಸಂಗ್ರಹಿಸುವುದು, ಮೂಲಭೂತ ಸೌಕರ್ಯಗಳಾದ ರಸ್ತೆಗಳು, ಒಳಚರಂಡಿ, ಚಂಡಮಾರುತದ ಒಳಚರಂಡಿ ಮತ್ತು ನೀರು ಮಾರ್ಗಗಳು, ಇತ್ಯಾದಿ ಜಾಲವನ್ನು ಗುರುತಿಸುವುದು ಮತ್ತು ಈ ರೀತಿಯ ಮೂಲಭೂತ ವ್ಯವಸ್ಥೆಯನ್ನು ಜಿಐಎಸ್ ಉಪಗ್ರಹ ಚಿತ್ರದ ವೇದಿಕೆ ಮೇಲೆ ಇರಿಸುವುದರ ಮೂಲಕ ಅವುಗಳನ್ನು ಕೊಳೆಗೇರಿ ಅಭಿವೃದ್ಧಿ ಯೋಜನೆಗಳು ಮತ್ತು ಕೊಳಚೆ ಮುಕ್ತ ಯೋಜನೆಗಳ ತಯಾರಿಕೆಯಲ್ಲಿ ಬಳಸಬೇಕು. ನಗರ ಯೋಜನೆಯಲ್ಲಿ ಇದು ಮೊದಲ ಹೆಜ್ಜೆ. ಇಲ್ಲಿ ಎನ್ ಆರ್ ಎಸ್ ಸಿ / ಇಸ್ರೋ / ಇತರ ತಾಂತ್ರಿಕ ಸಂಸ್ಥೆಗಳು / ಸಂಸ್ಥೆಗಳ ತಾಂತ್ರಿಕ ಸಹಾಯ ಪಡೆದುಕೊಳ್ಳಬಹುದು;

(v) ಕೊಳೆಗೇರಿ ಸಮೀಕ್ಷೆಗಾಗಿ ಗುರುತಿಸುವಿಕೆ ಹಾಗೂ ನಿಶ್ಚಿತ ಪ್ರಮುಖ ಸ್ವಯಂಸೇವಾ ಸಂಸ್ಥೆಗಳು ಮತ್ತು ಸಮುದಾಯ ಆಧಾರಿತ ಸಂಸ್ಥೆಗಳನ್ನು ಗುರುತಿಸಿ ಅವುಗಳ ಮಾರ್ಗದರ್ಶನ ಪಡೆಯುವುದು (ನಗರದ ವಿವಿಧ ಕೊಳಚೆ ವಲಯಗಳ ಒಂದಕ್ಕಿಂತ ಹೆಚ್ಚು ಎನ್ ಜಿ ಒ / ಸಿಬಿಒ ಇರಬಹುದು). ಈ ಎನ್ ಜಿ ಒ ಮತ್ತು ಸಿಬಿಒಗಳು ಕೊಳೆಗೇರಿ ಸಮೀಕ್ಷೆ, ಕೊಳಗೇರಿ ಅಭಿವೃದ್ಧಿಗಾಗಿ ಮಾತುಕತೆ ನಡೆಸುವಲ್ಲಿ ಮತ್ತು ಮರು ಅಭಿವೃದ್ಧಿ ಯೋಜನೆ ರೂಪಿಸುವಲ್ಲಿ ಸಹವರ್ತಿಗಳಾಗಬೇಕು;

(vi) ರಾಷ್ಟ್ರೀಯ ಕಟ್ಟಡಗಳ ಸಂಸ್ಥೆ (ಎನ್ ಬಿ ಒ) ಸಹಾಯದಿಂದ ವಸತಿ ಮತ್ತು ನಗರ ಬಡತನ ನಿವಾರಣೆಯ ಸಚಿವಾಲಯ ತಯಾರಿಸಿದ ವಿವರವಾದ ನಮೂನೆಯ ಆಧಾರದ ಮೇಲೆ (ಬದಲಾವಣೆಯೊಂದಿಗೆ ಅಥವಾ ಇಲ್ಲದೆಯೇ) ಕೊಳಚೆಗೇರಿ ಸಮೀಕ್ಷೆ ಯೋಜನೆಯು – ತರಬೇತುದಾರರ ತರಬೇತಿ, ಸಮೀಕ್ಷಕರ/ ಪ್ರಚಾರಕರ ಮತ್ತು ಪ್ರಚಾರದ ತರಬೇತಿ, ಆದ ಅನಂತರ ತಯಾರಿಸಲಾಗಿರುತ್ತದೆ. ಇಲ್ಲಿ ಲಭ್ಯವಿರುವ ಕೊಳೆಗೇರಿಯಿಂದ ಅಥವಾ ಅಕ್ಕಪಕ್ಕದ ಕೊಳಚೆಗೇರಿಯಲ್ಲಿ ಲಭ್ಯವಿರುವ ಅನೇಕ ಪ್ರಚಾರಕರನ್ನು ಬಳಸಿಕೊಳ್ಳುವುದು ಸಮುದಾಯವನ್ನು ಮುಂದೂಡುವ ಪ್ರಕ್ರಿಯೆಗೆ ನೆರವಾಗಬಲ್ಲದು;

(vii) ಮೇಲೆ ಹೇಳಿದ ಸಮೀಕ್ಷೆಯ ಆಧಾರದ ಮೇಲೆ, ಕೊಳಗೇರಿ ಜನರ ಗುರುತಿನ ದಾಖಲೆಗಳನ್ನು ಬಯೋಮೆಟ್ರಿಕ್ ಡೇಟಾದಿಂದ ಸಂಗ್ರಹಿಸುವುದು (ಆಧಾರ ಸಂಖ್ಯೆ (UIDAI) ನೀಡಿದ ಮಾರ್ಗದರ್ಶನಗಳಿಗನುಗುಣವಾಗಿ);

(iii)ವೆಬ್-ಆಧಾರವಿರುವ ಎಂಐಎಸ್ ಅಪ್ಲಿಕೇಶನ್ ನಲ್ಲಿ ಕೊಳಚೆಗೇರಿ ಸಮೀಕ್ಷೆಯ ದತ್ತಾಂಶಗಳನ್ನು ದಾಖಲಿಸುವುದು (ಹೆಚ್ ಯು ಪಿ ಎ ಮಂತ್ರಾಲಯವು ಒದಗಿಸುವ), ಸಂಗ್ರಹ ಮತ್ತು ನಗರವಾರು ಮತ್ತು ಕೊಳೆಗೇರಿವಾರು ದಾಖಲೆಗಳನ್ನು ತಯಾರಿಸಿ, ವರದಿ ಸಲ್ಲಿಸುವುದು. ಎಂ ಐ ಎಸ್ ಸಹಾಯದಿಂದ ಅತ್ಯುತ್ತಮ ಕೊಳೆಗೇರಿ ದಾಖಲೆಗಳನ್ನು ಸೃಷ್ಟಿಸಬಹುದು (ಎಂ ಐ ಎಸ್ ವೃದ್ಧಿಗೆ ಅಗತ್ಯವಿರುವ ಮಾರ್ಗದರ್ಶಿ ಸೂತ್ರಗಳು ಮತ್ತು ಸಾಫ್ಟ್ ವೇರ್ ಹೆಚ್ ಯು ಪಿ ಎ ಮಂತ್ರಾಲಯದಿಂದ ಒದಗಿಸಲ್ಪಡುತ್ತದೆ);

(ix)ನಗರದಗಲದ/ವಲಯವಾರು ಹಾದಿಯ ಮೂಲಕ ಅರ್ಥಪೂರ್ಣವಾದ ಕೊಳೆಗೇರಿ ಅಭಿವೃದ್ಧಿ ಯೋಜನೆಯನ್ನು ತಯಾರಿಸಲು ಮತ್ತು ಕೊಳೆಗೇರಿ-ಮುಕ್ತ ನಗರ ಯೋಜನೆಯ ತಯಾರಿಯಲ್ಲಿ

ಬಳಸಲು, ಜಿಐಎಸ್-ಶಕ್ತಗೊಂಡ ಕೊಳೆಗೇರಿ ಮಾಹಿತಿ ವ್ಯವಸ್ಥೆ ತಯಾರಿಕೆಗಾಗಿ ಕೊಳೆಗೇರಿ ಎಂ ಐ ಎಸ್ ಜೊತೆಗೆ ಜಿ ಐ ಎಸ್ ನಕಾಶೆಗಳ ಅಂತರ್ಗತಗೊಳಿಸುವಿಕೆ(ಮಾರ್ಗದರ್ಶನಗಳು ಮತ್ತು ಜಿಐಎಸ್ ವೇದಿಕೆಯ ಅಭಿವೃದ್ಧಿಗೆ ಸಾಫ್ಟ್ವೇರ್ ಮತ್ತು ಎಂ ಐ ಎಸ್ ಜೊತೆಗೆ ಅದರ ಏಕೀಕರಣ ಕ್ಕೆ ಹೆಚ್ ಯು ಪಿ ಎ ಸಚಿವಾಲಯದಿಂದ ನೀಡಲಾಗುತ್ತದೆ);

(x) ಪಿಪಿಪಿ ಅಭಿವೃದ್ಧಿ ಮಾದರಿ, ಕೇವಲ ಮೂಲಭೂತ ಸೌಕರ್ಯಗಳು, ರಾಜೀವ ಗಾಂಧಿ ಆವಾಸ ಯೋಜನೆಯ ಮೂಲಕ ಸಮುದಾಯ ಆಧಾರಿತ ಅಭಿವೃದ್ಧಿ ಮಾದರಿ, ಇತ್ಯಾದಿಗಳನ್ನಾಧರಿಸಿದ, ಪ್ರತಿಯೊಂದು ಕೊಳೆಗೇರಿ ಅಭಿವೃದ್ಧಿ ನಕ್ಷೆಯನ್ನು ತಯಾರಿಸುವುದು. ಈ ನಿರ್ಧಾರವನ್ನು ಸಮುದಾಯಗಳ ಪಾಲ್ಗೊಳ್ಳುವಿಕೆಯೊಂದಿಗೆ ಮತ್ತು ಅವುಗಳೊಂದಿಗಿನ ಮಾತುಕತೆಯ ಆಧಾರದ ಮೇಲೆ ತೆಗೆದುಕೊಳ್ಳಬೇಕು. ಪ್ರತಿಯೊಂದು ಕೊಳೆಗೇರಿ ಯೋಜನೆಯೂ, ಪ್ರತಿ ಚಟುವಟಿಕೆಗೂ ಒಂದು ನಿರ್ದಿಷ್ಟ ಅವಧಿಯನ್ನು ಹೊಂದಿರಬೇಕು; ಮತ್ತು

(XI)ಕೊಳೆಗೇರಿ ನಿರ್ಮೂಲನೆ ಮತ್ತು ಕೊಳಗೇರಿ ಮುಕ್ತ ನಗರ ಹಾಗೂ ನಗರ ಬಡವರ ಅಭಿವೃದ್ಧಿಯ ದೃಷ್ಟಿಯಿಂದ ಪ್ರತಿಯೊಂದು ಕೊಳೆಗೇರಿ ಪುನರಾಭಿವೃದ್ಧಿ ಯೋಜನೆಯನ್ನು ತಯಾರಿಸಬೇಕು. ಇದರಲ್ಲಿ ನಗರ ಬಡವರ ಅಭಿವೃದ್ಧಿಗಾಗಿ ಭೂಮಿ ಮೀಸಲಾತಿಯನ್ನೂ ಒಳಗೊಂಡಿರಬೇಕು. ಪ್ರತಿಯೊಂದು ಯೋಜನೆಯೂ ತಗಲುವ ವೆಚ್ಚ, ಅವಧಿ ಮತ್ತು ವ್ಯವಸ್ಥಿತ ಕಾರ್ಯನಿರ್ವಹಣೆಯನ್ನು ಯೋಜನೆಯು ನಮೂದಿಸಿರಬೇಕು.

ರಾಜ್ಯ ಮತ್ತು ನಗರ ಸರ್ಕಾರಗಳಿಗೆ ಅಗತ್ಯವಾದ ಹೆಚ್ಚುವರಿ ಮಾರ್ಗದರ್ಶನಗಳನ್ನು ಅನುಬಂಧ IV ರಲ್ಲಿ ವಿವರಿಸಲಾಗಿದೆ.

4.3 ಕೊಳೆಗೇರಿ ಮುಕ್ತ ನಗರ ಯೋಜನಾ ತಂಡ (ರಾಜ್ಯ ಸರ್ಕಾರ/ಯು ಎಲ್ ಬಿ)

ಒಂದು ರಾಜ್ಯವು ರಾಜ್ಯ ನೋಡಲ್ ಏಜೆನ್ಸಿ ಮಟ್ಟದಲ್ಲಿ ಮೊದಲು ಒಂದು ಕೊಳೆಗೇರಿ ಮುಕ್ತ ನಗರ/ತಾಂತ್ರಿಕ ಸಮಿತಿಯನ್ನ ನಿಗದಿತ ಪ್ರತಿ ನಗರದಲ್ಲೂ ಸ್ಥಾಪಿಸಬೇಕು. ಈ ಸಮಿತಿಯನ್ನು ಆರ್ಎವೈ/ಜೆ ಎನ್ ಎನ್ ಯು ಆರ್ ಎಂ ನೋಡಿಕೊಳ್ಳುವ ಕಾರ್ಯದರ್ಶಿಯು ರಾಜ್ಯ ಮಟ್ಟದಲ್ಲಿ ನೋಡಿಕೊಳ್ಳುತ್ತಾನೆ ಮತ್ತು ಆರ್ಎವೈಗಾಗಿ ಕಾರ್ಯನಿರ್ವಹಿಸುವ ರಾಜ್ಯ ನೋಡಲ್ ಏಜೆನ್ಸಿ ಅಧಿಕಾರಿಯು ಸಂಯೋಜಕನಾಗಿರುತ್ತಾನೆ. ರಾಜ್ಯ ಸರ್ಕಾರವು ಈ ಸಮಿತಿಯ ರಚನೆಯನ್ನು ನಿರ್ಧರಿಸುತ್ತದೆ. ಇನ್ನು ನಗರ ಮಟ್ಟದಲ್ಲಿ, ಈ ಸಮಿತಿಯನ್ನು ಪುರಸಭೆ ಆಯುಕ್ತ/ಕಾರ್ಯನಿರ್ವಾಹಕ ಅಧಿಕಾರಿಯು ಉಪ ಆಯುಕ್ತರು ಕೊಳೆಗೇರಿ/ನಗರ ಅಭಿವೃದ್ಧಿ ಸಮಿತಿ, ಇವರ ಸಹಾಯದಿಂದ ನೋಡಿಕೊಳ್ಳುತ್ತಾನೆ. ಸಮಿತಿಯಲ್ಲಿ ಎಲ್ಲಾ ಮುನಿಸಿಪಲ್ ಇಲಾಖೆಯ ಮುಖ್ಯಸ್ಥರು ಇರುತ್ತಾರೆ. ಪ್ರತಿಯೊಂದು ನಗರದಲ್ಲಿ ಕೊಳೆಗೇರಿ ಮುಕ್ತ ಸಮಿತಿ/ತಾಂತ್ರಿಕ ಸಮಿತಿಯಿದ್ದು ಅದು ನ್ಯಾಶನಲ್ ರಿಮೋಟ್ ಸೆನ್ಸಿಂಗ್ ಸೆಂಟರ್/ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಮತ್ತ್ ಇತರ ತಾಂತ್ರಿಕ ಸಂಸ್ಥೆಗಳೊಂದಿಗೆ ಸಕ್ಷಮವಾಗಿ ವ್ಯವಹರಿಸಲು ಶಕ್ತವಾಗಿರಬೇಕು.

ಆರ್ ಎ ವೈ/ ನಗರ ಸ್ಥಳೀಯ ಆಡಳಿತ ಸಮಿತಿಗಾಗಿ ಇರುವ ರಾಜ್ಯ ನೋಡಲ್ ಏಜೆನ್ಸಿಯ ತಾಂತ್ರಿಕ ಸಮಿತಿಯು (ಕೊಳಚೆಗೇರಿ-ಮುಕ್ತ ನಗರ ಯೋಜನೆಯ ತಯಾರಿಗಾಗಿ ಗುರುತಿಸಿದ) ಪಾರದರ್ಶಕ ರೀತಿಯಲ್ಲಿ ಆಯ್ಕೆಗೊಂಡ ತಜ್ಞರನ್ನು ಗುತ್ತಿಗೆ ಆಧಾರದ ಮೇಲೆ ಹೊಂದಿರಬಹುದು. (ಅವರಿಗೆ ನೀಡಲಾಗುವ ಮಾಸಿಕ ವೇತನವು 75,000 ರೂಪಾಯಿಗಳಿಗೆ ಮೀರದಂತಿದ್ದು, ಅದು ಅವರ ಅನುಭವ ಮತ್ತು ಕೌಶಲ್ಯವನ್ನು

ಆಧರಿಸಿರುತ್ತದೆ):

• ಎಂಐಎಸ್ ತಜ್ಞ - 1

• ಜಿಐಎಸ್ ತಜ್ಞ- 1

• ಪಟ್ಟಣ ಯೋಜನಾ ತಜ್ಞ- 1

• ಸಾಮಾಜಿಕ ಅಭಿವೃದ್ಧಿ ತಜ್ಞ - 1

• ಯೋಜನೆ / ಎಂಜಿನಿಯರಿಂಗ್ ತಜ್ಞ - 1 ಮತ್ತು

• ಸಾಮರ್ಥ್ಯ ನಿರ್ಮಾಣ/ ತರಬೇತಿ ಸಂಯೋಜಕ-1.

5. **Government of India's Support ಭಾರತದ ಸರ್ಕಾರದ ಬೆಂಬಲ**

ಕೇಂದ್ರ ಸರ್ಕಾರವು ಯಾವ ಕೊಳಗೇರಿ ಮುಕ್ತ ನಗರ ಯೋಜನೆಗಾಗಿ ಎಂತಹ ಚಟುವಟಿಕೆಗಳಿಗೆ ಬೆಂಬಲ ನೀಡುತ್ತದೆಯೋ ಅವುಗಳು ಇಂತಿವೆ:

5.1 ಆರ್ಥಿಕ ಬೆಂಬಲ

- ಆರ್ಥಿಕ ಬೆಂಬಲ ನಗರಗಳಲ್ಲಿ ರಾಷ್ಟ್ರೀಯ ಕಟ್ಟಡಗಳ ಸಂಸ್ಥೆ (NBO)ಯ ಸಹಾಯದಿಂದ ವಸತಿ ಮತ್ತು ನಗರ ಬಡತನ ನಿವಾರಣೆಯ ಸಚಿವಾಲಯ ತಯಾರಿಸಿದ ವಿಸ್ತೃತ ವಿನ್ಯಾಸಗಳನ್ನುಆಧರಿಸಿದ ಸಮೀಕ್ಷೆ ನಡೆಸುವುದು, ಅದು ತರಬೇತಿದಾರರ ತರಬೇತಿ, ರಬೇತಿ ನಡೆಸುವುದು, ಪ್ರಚಾರ ಮತ್ತು ನಗರಗಳ ಸಮೀಕ್ಷೆ, ರಾಜ್ಯ ಎಂ ಐ ಎಸ್ ಗಳನ್ನು ಒಳಗೊಂಡಿದೆ;
- ಕೊಳೆಗೇರಿ ಮುಕ್ತ ನಗರ ಯೋಜನೆಗಳಿಗಾಗಿ ಸಹಾಯವಾಗಲೆಂದು ಕೊಳೆಗೇರಿ ಸಮೀಕ್ಷೆಗಳ ವರದಿಗಳನ್ನು ಎಂ ಐ ಎಸ್ ಸಾಫ್ಟ್ ವೇರ್ ನಲ್ಲಿ ದತ್ತಾಂಶಗಳನ್ನು ದಾಖಲಿಸುವುದು;
- ಕಾರ್ಟೋಸ್ಯಾಟ್ II ವೆಚ್ಚ, ಅಂತರಿಕ್ಷ ಸಮಗ್ರ ನಿಲ್ದಾಣ ಸಮೀಕ್ಷೆಗಳು (ಸ್ಪೇಶಿಯಲ್ ಟೋಟಲ್ ಸ್ಟೇಶನ್ ಸರ್ವೇಸ್), ಕೊಳಗೇರಿ ಎಂ ಐ ಎಸ್ ಜೊತೆ ಜಿ ಐ ಸಿ ವಿಲೀನಗೊಳಿಸುವಿಕೆ ಒಳಗೊಂಡಂತೆ, ಇತ್ತೀಚಿನ ಉಪಗ್ರಹ ಚಿತ್ರಗಳನ್ನು ಬಳಸಿಕೊಂಡು ನಗರ ಮತ್ತು ಕೊಳೆಗೇರಿಯ ಮೂಲ-ನಕ್ಷೆ ತಯಾರಿಸುವುದು (ಅರ್ಥಪೂರ್ಣ ಕೊಳಗೇರಿ ಅಭಿವೃದ್ಧಿ ಯೋಜನೆ ಹಾಗೂ ಕೊಳಗರಿ -ಮುಕ್ತ ನಗರ ಯೋಜನೆಯ ತಯಾರಿಗಾಗಿ, ಜಿ ಐ ಎಸ್ ಶಕ್ತ-ಕೊಳೆಗೇರಿ ಮಾಹಿತಿ ವ್ಯವಸ್ಥೆಯ ನಿರ್ಮಾಣಕ್ಕಾಗಿ) . ತಂತ್ರಜ್ಞಾನ ಸಮಿತಿಯ ಸಲಹೆಯ ಮೇರೆಗೆ ರಾಜ್ಯ ಮತ್ತು ಯುಎಲ್ ಬಿ ಮಟ್ಟದಲ್ಲಿ ಸಾಫ್ಟ್ ವೇರ್ ಮತ್ತು ಹಾರ್ಡ್ ವೇರ್ ಗಳನ್ನು ಸಂಗ್ರಹಿಸುವುದು;
- ಪ್ರತಿ ನಗರಕ್ಕಾಗಿ ವಿವರಣಾತ್ಮಕವಾದ ಕೊಳೆಗೇರಿ ಮುಕ್ತ ನಗರ ಯೋಜನೆಗಳನ್ನು ತಯಾರಿಸುವುದಕ್ಕಾಗಿ ಸಲಹೆಗಾರರು/ತಾಂತ್ರಿಕ ಏಜೆನ್ಸಿಗಳು/ಸಂಸ್ಥೆಗಳನ್ನು ನೇಮಿಸುವುದು;
- ಆಯ್ದ ನಗರ/ ನಗರ ಸಮೂಹಗಳಲ್ಲಿ ಕೊಳೆಗೇರಿ ಮುಕ್ತ ನಗರ ಯೋಜನೆಗಾಗಿ ಸಮುದಾಯವನ್ನು ಮುನ್ನಡೆಸಲು ಎನ್ ಜಿ ಒ/ ಸಿ ಬಿ ಒಗಳ ಮಾರ್ಗದರ್ಶನವನ್ನು ಪಡೆಯುವುದು;
- ಆಧಾರ ಸಂಖ್ಯೆ (UIADI) ಹೇಳಿರುವಂತಹ ಸಲಹೆಗಳ ಮೇರೆಗೆ, ಕೊಳೆಗೇರಿ ವಾಸಿಗಳ ಬಯೋಮೆಟ್ರಿಕ್ ಮಾಹಿತಿಗಳನ್ನು ಸಂಗ್ರಹಿಸುವುದು ಮತ್ತು ಅದಕ್ಕೆ ಬೇಕಾದ ಹಾರ್ಡ್ ವೇರ್ ಗಳನ್ನು ಸಂಗ್ರಹಿಸಿಡುವುದು (ಕೊಳೆಗೇರಿ ನಿವಾಸಿಗಳಿಗೆ ಬಯೋಮೆಟ್ರಿಕ್ ಗುರುತು ಚೀಟಿ ನೀಡುವುದನ್ನು ಹೊರತುಪಡಿಸಿ); ಮತ್ತು
- ರಾಷ್ಟ್ರೀಯ ತಾಂತ್ರಿಕ ಸಂಸ್ಥೆ (ನ್ಯಾಶನಲ್ ಟೆಕ್ನಿಕಲ್ ಇನ್ಸ್ಟಿಟ್ಯೂಶನ್)ಗಳು ಮತ್ತು ರಾಷ್ಟ್ರೀಯ

ಸಂಪನ್ಮೂಲ ಕೇಂದ್ರಗಳ ಜಾಲ (ನ್ಯಾಶಲನ್ ನೆಟ್ ವರ್ಕ್ ಆಫ್ ರೆಸೋರ್ಸ್ ಸೆಂಟರ್ಸ್) ಸಹಾಯದಿಂದ ಕೊಳೆಗೇರಿ ಮುಕ್ತ ನಗರ/ರಾಜ್ಯ ಯೋಜನೆ, ಬಡವರ ಉದ್ಧಾರಕ್ಕಾಗಿ ಯೋಜನೆ, ಕೊಳೆಗೇರಿ ಎಂಎಸ್ಐ /ಜಿಐಎಸ್ ನಕ್ಷೆ, ಕೊಳೆಗೇರಿ ನಕ್ಷೆ ತಯಾರಿಕೆ, ಯೋಜನೆ ನಿರ್ವಹಣೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ತರಬೇತಿ ಕಾರ್ಯಕ್ರಮ ನಡೆಸುವುದು.

5.2 ಸಹಾಯಹಸ್ತ ನೀಡುವ / ಸಾಮರ್ಥ್ಯ ಅಭಿವೃದ್ಧಿ ಬೆಂಬಲ

ಹೆಚ್ ಯುಪಿಎ ಸಚಿವಾಲಯವು ಕೊಳೆಗೇರಿ ಮುಕ್ತ ನಗರ/ರಾಜ್ಯ ಯೋಜನೆಗಾಗಿ ರಾಜ್ಯ/ನಗರ ಸರ್ಕಾರಗಳಿಗೆ ನೆರವಾಗಲು ಈ ಕೆಳಗಿನವುಗಳನ್ನು ಒಳಗೊಂಡಿರುವ ಇ-ಪರಿಕರಗಳನ್ನು ಮತ್ತು ಕೈಪಿಡಿಗಳನ್ನು ಅಭಿವೃದ್ಧಿಪಡಿಸುವಲ್ಲಿ ಭಾಗಿಯಾಗುತ್ತದೆ:

a. ಕೊಳೆಗೇರಿ ಸಮೀಕ್ಷೆ ಎಂ ಐ ಎಸ್ - ಇ-ಉಪಕರಣ (ಬಯೋ-ಮೆಟ್ರಿಕ್ ಮಾಹಿತಿ ಸಂಗ್ರಹ ಸೇರಿದಂತೆ) ಮತ್ತು ಅದೇ ಬಳಕೆಗಾಗಿ ಕೈಪಿಡಿ;

b. ಜಿಐಎಸ್ ಬಳಸಿ ಕೊಳೆಗೇರಿ ನಕ್ಷೆ ತಯಾರಿಸಲು ಉಪಕರಣ-ರಾಜ್ಯಗಳಿಗಾಗಿ/ನಗರ ಸ್ಥಳೀಯ ಆಡಳಿತ ಸಮಿತಿಗಳಿಗಾಗಿ ಕೊಳೆಗೇರಿ ನಕ್ಷೆಗಳ ತಯಾರಿ ಮಾರ್ಗದರ್ಶಿ ಸೂತ್ರಗಳನ್ನು ರಚಿಸುವುದು; ರಾಜ್ಯ/ ಸ್ಥಳೀಯ ಸಂಸ್ಥೆಳಿಗೆ ತಾಂತ್ರಿಕ ಸಲಹೆ ನೀಡುವುದು; ಜಿಐಎಸ್- ಎಂ ಐಎಸ್ ವಿಲೀನಗೊಳಿಸುವಿಕೆ ಮತ್ತು ಡೈನಾಮಿಕ್ ಪರಿಕರ, " ಜಿಐಎಸ್ ಶಕ್ತ ಕೊಳೆಗೇರಿ ಎಂಐಎಸ್" ದ ಅಭಿವೃದ್ಧಿ; ಇದರಿಂದ ಕೊಳೆಗೇರಿ-ಮುಕ್ತ ನಗರ ಯೋಜನೆಗಳು ಮತ್ತು ಅವುಗಳ ಪರಿವೀಕ್ಷಣೆಗೆ ಯೋಗ್ಯ ಪರಿಕರವಾಗಿ ಅದರ ಬಳಕೆ; ದೂರದರ್ಶಿ ಸಮೀಕ್ಷೆ ಮತ್ತು ರಿಮೋಟ್ ಸೆನ್ಸಿಂಗ್ ತಂತ್ರಜ್ಞಾನದಿಂದ ದೊರಕಿದ ಭೌಗೋಳಿಕ ದಾಖಲೆಗಳನ್ನು ಬಳಸಿ ಕೊಳೆಗೇರಿ ಸಮಿಕ್ಷೆ ಆಧರಿಸಿದ ಎಂಐಎಸ್ ಸಮಗ್ರತೆಗಾಗಿ ಸಾಫ್ಟವೇರ್ ಮತ್ತು ಮಾರ್ಗದರ್ಶನಗಳನ್ನು ತಯಾರಿಸುವುದು. ಸ್ಪೇಶಿಯಲ್ ಪ್ಲಾನಿಂಗ್ ಫಾರ್ ಸಿಟೀಸ್ ಚೌಕಟ್ಟಿನೊಳಗೆ ಕೊಳೆಗೇರಿ ನಕ್ಷೆ ತಯಾರಿಸಲು ಬೇಕಾದ ಸಲಕರಣೆಗಳನ್ನು ಮತ್ತು ತಂತ್ರಜ್ಞಾನಗಳನ್ನು ಬಳಸುವ ಕೈಪಿಡಿಗಳನ್ನು ನೀಡುವುದು. ಕೊಳೆಗೇರಿ ನಕಾಶೆ ತಯಾರಿಯ ಚಟುವಟಿಕೆಯು ಮಾಸ್ಟರ್ ಯೋಜನೆಯ ಚೌಕಟ್ಟನ್ನು ಗಮನದಲ್ಲಿರಿಸಬೇಕಾಗುತ್ತದೆ; ಕೊಳೆಗೇರಿ ಮುಕ್ತನಗರ/ರಾಜ್ಯಗಳಿಗಾಗಿ ಯೋಜನೆಗಳನ್ನು ತಯಾರಿಸಲು ಹಂತ ಹಂತವಾದ ಮಾರ್ಗದರ್ಶನಗಳು ಮತ್ತು ಕೊಳೆಗೇರಿ ಮುಕ್ತ ನಗರಗಳಿಗಾಗಿ ಸುಧಾರಣೆಗೆ ಬೇಕಾದ ಮಾರ್ಗದರ್ಶನಗಳು; ವಸತಿ ಮತ್ತು ನಗರ ಬಡತನ ನಿರ್ಮೂಲನೆ ಸಚಿವಾಲಯವು ರಾಜ್ಯಗಳು/ಕೇಪ್ರಗಳಿಗೆ ಮೇಲೆ ತಿಳಿಸಿದ ಚಟುವಟಿಕೆಗಳಿಗಾಗಿ ಬೇಕಾದ ಮಾರ್ಗದರ್ಶನಗಳನ್ನು ನೀಡಲು ಒಂದು ತಾಂತ್ರಿಕ ಸಮಿತಿಯನ್ನು ಸ್ಥಾಪಿಸಿ, ಅದಕ್ಕೆ ಬೇಕಾದ ಕೆಲಸವನ್ನು ಹೊರಗಿನವರಿಂದ ಪಡೆದುಕೊಳ್ಳುತ್ತದೆ ಮತ್ತು ಅವರಿಗೆ 4.3 ನೇ ಪ್ಯಾರಾದಲ್ಲಿ ತಿಳಿಸಿರುವಂತೆ ಸಂಭಾವನೆಯನ್ನೂ ನೀಡುತ್ತದೆ. ಕೊಳೆಗೇರಿ ಮುಕ್ತ ನಗರ ಯೋಜನೆಗಾಗಿ ದುಡಿಯುವ ಅಧಿಕಾರಿಗಳಿಗೆ/ಅಧಿಕಾರೇತರರಿಗೆ ವಿವಿಧ ಮಾರ್ಗದರ್ಶನಗಳು, ಕೈಪಿಡಿಗಳು, ಪರಿಕರಗಳು ಮತ್ತು ತಂತ್ರಜ್ಞಾನಗಳು, ಚಟುವಟಿಕೆಗಳ ಕುರಿತು ತರಬೇತಿ ನೀಡಲೆಂದು ಮತ್ತು ಸಾಮರ್ಥ್ಯ ಹೆಚ್ಚಿಸಲು ಸಚಿವಾಲಯವು ಸಾಮರ್ಥ್ಯ ನಿರ್ಮಾಣ ಮತ್ತು ತರಬೇತಿ ಸಮಿತಿಗಳನ್ನು ಬೆಂಬಲಿಸುತ್ತದೆ. ಈ ಸಂಸ್ಥೆಗಳು ಸಹಾಯಹಸ್ತ/ಸಾಮರ್ಥ್ಯ ಅಭಿವೃದ್ಧಿಗಾಗಿ ರಾಜ್ಯಗಳಿಗೆ ಮತ್ತು ಕೇ.ಪ್ರ.ಗಳಿಗೆ ಈ ಕೆಳಗಿನ ವಿಷಯಗಳಲ್ಲಿ ಬೆಂಬಲ ನೀಡುತ್ತವೆ: a) ಜಿ ಐ ಎಸ್ ನಕ್ಷೆ ತಯಾರಿ b)

ಕೊಳೆಗೇರಿ ಸಮೀಕ್ಷೆ ಮತ್ತು ಎಮ್ ಐ ಎಸ್ c) ಕೊಳೆಗೇರಿ ಮುಕ್ತ ನಗರ ಯೋಜನೆ ಮತ್ತು d) ಅಂತರ್ವಿಷ್ಟ ನಗರ ಯೋಜನೆಗಾಗಿ ಶಾಸನಾತ್ಮಕ ಚೌಕಟ್ಟು

**6. Other Modalities of Scheme ಯೋಜನೆಯ ಇತರ ವಿಧಾನಗಳು:**

6.1 ಕೊಳೆಗೇರಿ ಮುಕ್ತ ನಗರ ಯೋಜನೆ ಯೋಜನೆಯು ರಾಷ್ಟ್ರ ನಿರ್ವಹಣಾ ಸಮಿತಿಯ ಮಾರ್ಗದರ್ಶನದಲ್ಲಿ,

ಕಾರ್ಯದರ್ಶಿ (ಹೆಚ್ ಯುಪಿಎ)ಯವರ ಅಧ್ಯಕ್ಷತೆಯಲ್ಲಿ ಜಾರಿಗೆ ಬರುತ್ತದೆ - ರಚನೆಯನ್ನು ಅನುಬಂಧ Vರಲ್ಲಿ ನೀಡಲಾಗಿದೆ. ಈ ಸಮಿತಿಯು ಸಮಯ ಮಿತಿಯ ಚೌಕಟ್ಟಿನೊಳಗ್ ರಾಜ್ಯಗಳು/ಕೇ.ಪ್ರ.ಗಳು ತಯಾರಿಸುವ ಕೊಳೆಗೇರಿ ಮುಕ್ತ ನಗರ ಯೋಜನೆಗಳ ತಯಾರಿಯನ್ನು ನಿರ್ವಹಿಸುತ್ತದೆ ಮತ್ತು ಮೇಲ್ವಿಚಾರಿಸುತ್ತದೆ. ಒಂದು ತಾಂತ್ರಿಕ ಸಮಿತಿ (ರಚನೆ ವಿವರ ಅನುಬಂಧ VI ರಲ್ಲಿ)ಯು ಸಾಫ್ಟವೇರ್ ಮತ್ತು ಹಾರ್ಡ್ ವೇರ್ ಸಂಗ್ರಹಣೆ, ತಂತ್ರಜ್ಞಾನ, ಲೆಕ್ಕಪತ್ರ, ಯೋಜನೆ ಮತ್ತು ಇತರ ಕೆಲಸಗಳಿಗೆ ಸಂಬಂಧಿಸಿದಂತೆ ರಾಜ್ಯಗಳಿಗೆ/ಕೇ.ಪ್ರ.ಗಳಿಗೆ ಮಾರ್ಗದರ್ಶನ ನೀಡುತ್ತದೆ ಮತ್ತು ರಾಷ್ಟ್ರೀಯ ನಿರ್ವಹಣಾ ಸಮಿತಿಗೆ ಸಹಾಯಕನಾಗಿ ಕಾರ್ಯನಿರ್ವಹಿಸುತ್ತದೆ.

6.2 ರಾಜ್ಯಗಳು/ಕೇ.ಪ್ರ.ಗಳು ಕೊಳೆಗೇರಿ ಮುಕ್ತ ನಗರ ಯೋಜನೆ - ರಾಜೀವ್ ಆವಾಸ ಯೋಜನೆಯಡಿಯಲ್ಲಿ ಬೆಂಬಲ ಕೋರಿ ವಿವರವಾದ ಪ್ರಸ್ತಾವನೆಗಳನ್ನು ಜೆ ಎನ್ ಎನ್ ಯು ಆರ್ ಎಂ/ ಆರ್ ಎ ವೈ ಗಾಗಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರ ಮಂಜೂರಾತಿ ಮತ್ತು ಮೇಲ್ವಿಚಾರಣಾ ಸಮಿತಿಗೆ ಕಳುಹಿಸಬೇಕಾಗುತ್ತದೆ. ಅನಂತರ ಆ ಸಮಿತಿಯೇ ಮಂಜೂರಾತಿ ಕೊಡಬಹುದು/ಬಿಡಬಹುದು. ಒಂದುವೇಳೆ ಮಂಜೂರಾತಿ ದೊರೆತರೆ, ಯೋಜನೆಗೆ ಬೇಕಾದ ಹಣವನ್ನು ಹಣಕಾಸು/ವಸತಿ ಮತ್ತು ನಗರ ಬಡತನ ನಿರ್ಮೂಲನಾ ಸಚಿವಾಲಯವು ಬಿಡುಗಡೆ ಮಾಡುತ್ತದೆ.

6.3 ಕೊಳೆಗೇರಿ ಮುಕ್ತ ನಗರ ಯೋಜನೆಗಾಗಿ ಇರುವ ರಾಷ್ಟ್ರೀಯ ನಿರ್ವಹಣಾ ಸಮಿತಿ-ರಾಜೀವ್ ಆವಾಸ ಯೋಜನೆಯು, ಈ ಯೋಜನೆಯಡಿಯಲ್ಲಿ ಆರ್ಥಿಕ ಮತ್ತು ಭೌತಿಕ ಅಭಿವೃದ್ಧಿಯನ್ನು ಗಮನಿಸುತ್ತದೆ.